ನನ್ನ ಓದು

# ಕೌಟುಂಬಿಕ ಕ್ರೌರ್ಯವನ್ನು ಹಿಡಿದಿಡುವ ಕಥೆಗಳು

**ಗೌರಿ**

'ಹಿಂಡೆಕುಳ್ಳು' ಮತ್ತು 'ಬಾಂಗ್ಲಾದ ಹಕ್ಕಿಗಳು' ಸಂಕಲನದ ಮೂಲಕ ಗಮನ ಸೆಳೆದಿರುವ ಅಮರೇಶ ಗಿಣಿವಾರ ಅವರ ಮೂರನೇ ಕಥಾಸಂಕಲನ 'ಬೀಜದ ಮನುಷ್ಯ'. ತಮ್ಮ ಕಥನಗಾರಿಕೆಯ ದಾರಿಯಲ್ಲಿ ಅವರು ಹೊಸ ಜಿಗಿತವನ್ನು ಸಾಧಿಸಿರುವುದರ ಕುರುಹು ಇಲ್ಲಿನ ಬಹುತೇಕ ಕಥೆಗಳಲ್ಲಿ ಎದ್ದು ಕಾಣಿಸುತ್ತದೆ.

ಪುರುಷಪ್ರಧಾನ ಸಮಾಜ ಮತ್ತು ಅದರ ಭಾಗವಾಗಿರುವ ಕುಟುಂಬ ವ್ಯವಸ್ಥೆಯ ಕ್ರೌರ್ಯದ ನಾನಾ ಮುಖಗಳನ್ನು ಬಿಚ್ಚಿಡುವ ಪ್ರಯತ್ನವನ್ನು ಇಲ್ಲಿನ ಕಥೆಗಳು ಮಾಡುತ್ತವೆ. ಈ ಕ್ರೌರ್ಯ ವ್ಯವಸ್ಥೆಯ ಬಲಿಪಶು ಯಾವಾಗಲೂ ಹೆಣ್ಣೇ. ಹಾಗಾಗಿ ಇಲ್ಲಿನ ಬಹುತೇಕ ಕಥೆಗಳ ಕೇಂದ್ರದಲ್ಲಿರುವುದು ಹೆಣ್ಣು. ಅವಳನ್ನು ಪಳಗಿಸಲು, ಬಳಸಿಕೊಳ್ಳಲು, ಬಲಿಹಾಕಲು ಕಾದು ಕೂತಿರುವ ಪುರುಷವ್ಯವಸ್ಥೆ, ಅದರ ನಖಗಳಾದ ಸಂಪ್ರದಾಯ, ಮೌಲ್ಯವ್ಯವಸ್ಥೆ, ಮೌಢ್ಯನಂಬಿಕೆಗಳು ನಾನಾ ವೇಷಗಳಲ್ಲಿ ಇಲ್ಲಿನ ಕಥೆಗಳಲ್ಲಿ ಕಾಣಿಸಿಕೊಳ್ಳುತ್ತವೆ. ಆದರೆ, ತಾವು ಕಟ್ಟಿಕೊಡಲು ಹೊರಟಿರುವ ದಾರುಣ ಜಗತ್ತಿನ ಕುರಿತಾದ ತೀವ್ರವಾದ ಕಾಳಜಿಯ ಜೊತೆಗೆ, ಅದು ಕಲೆಯಾಗಿಯೂ ಗೆಲ್ಲುವುದು ಮುಖ್ಯ ಎಂಬ ಎಚ್ಚರವೂ ಅವರಿಗೆ ಇದೆ. ಈ ಎಚ್ಚರ ಮತ್ತು ಕಾಳಜಿಗಳೇ ಈ ಸಂಕಲನವನ್ನು ಗಟ್ಟಿಕಾಳನ್ನಾಗಿ ರೂಪಿಸಿದೆ.

ಸಂಕಲನದ ಮೊದಲ ಕಥೆ 'ಬೀಜದ ಮನುಷ್ಯ'ದಲ್ಲಿ ಈ ವ್ಯವಸ್ಥೆಗೆ ಪಾಳೇಗಾರಿಕೆಯೂ ಸೇರಿಕೊಂಡು ಇನ್ನಷ್ಟು ಸಂಕೀರ್ಣವಾಗಿದೆ. ಈ ಕಥೆ ನಡೆಯುವ ಊರಿನಲ್ಲಿ, ಮದುವೆಯಾಗಿ ಎರಡು ವರ್ಷದೊಳಗೆ ಮಕ್ಕಳಾದರೂ ಆಗಬೇಕು ಇಲ್ಲವೇ ಗರ್ಭವನ್ನಾದರೂ ಕಟ್ಟಬೇಕು. ಇಲ್ಲದಿದ್ದರೆ ಆ ಗಂಡಸರಿಗೆ 'ಹಡಕಾ' ಎಂದು ಹೆಸರಿಟ್ಟು ಹಡಕರ ಪಟ್ಟಿಯಲ್ಲಿ ಸೇರಿಸುವ ವಿಚಿತ್ರ, ಅಮಾನವೀಯ ಪದ್ಧತಿ ಇದೆ. ಆ ಪದ್ಧತಿಗೆ ಎರವಾಗುವ ಕಥಾನಾಯಕನ ಕಣ್ಣಿನಲ್ಲಿಯೇ ಈ ಕಥೆ ಬಿಚ್ಚಿಕೊಳ್ಳುತ್ತದೆ. ಮಕ್ಕಳಾಗಿಲ್ಲ ಎನ್ನುವ ಕಾರಣಕ್ಕೆ ಅವನು ಊರಿನವರ ಕಣ್ಣಿನಲ್ಲಿ ನಿಷ್ಪ್ರಯೋಜಕ ಆಗಿರುವುದಷ್ಟೇ ಅಲ್ಲ, ಮನೆಯವರ ಕಣ್ಣಿನಲ್ಲಿಯೂ ಕುಲದ ಗೌರವಕ್ಕೆ ಧಕ್ಕೆ ತರುತ್ತಿರುವ ಅನಿಷ್ಟವಾಗಿ ಕಾಣಿಸುತ್ತಿದ್ದಾನೆ. ಅವಮಾನವನ್ನು ಜೊತೆಯಾಗಿ ಹಂಚಿಕೊಂಡರೂ, ಆ ಪದ್ಧತಿಗೆ ನೇರ ಬಲಿಪಶು ಕೊನೆಗೂ ಅವನ ಹೆಂಡತಿ ಪಾರ್ವತಿಯೇ. ಯಾಕೆಂದರೆ ಗಂಡನಿಂದ ಮಕ್ಕಳಾಗದಿದ್ದವರು, ಬೀಜದ ಮನುಷ್ಯನನ್ನು ಉಡ್ಲಲ್ಲಿ ಹಾಕಿಕೊಂಡು ಮಕ್ಕಳನ್ನು ಮಾಡಿಕೊಳ್ಳಬೇಕು. ಇಂಥ ಪದ್ಧತಿಗೆ ಒಳಗಾಗಬೇಕಾಗಿ ಬಂದಾಗ ಬಲವಾಗಿ ಪ್ರತಿಭಟನೆಯ ಧ್ವನಿ ಎತ್ತುವವಳೂ ಹೆಣ್ಣೇ ಎನ್ನುವುದನ್ನು ಗಮನಿಸಬೇಕು.

'ಲೋ ಬಾಡಕೋಗಳೇ... ಯಾಕರಲೋ ನಿಮ್ಮ ಜಾತಿಯೊಳಗ ಒಬ್ಬರೂ ಹಡುಕರಾಗಿಲ್ಲ?' ಎಂಬ ಪ್ರಶ್ನೆಯನ್ನು ಪಂಚಾಯಿತಿಗೆ ಕುಂತ ಮೇಲುಜಾತಿಯವರ ಮುಖಕ್ಕೆ ಎಸೆಯುವ ಪಾರ್ವತಿ, ಮಲ್ಲಿಯೊಂದಿಗೆ ಊರು ಬಿಟ್ಟು ಓಡಿಹೋಗುತ್ತಾಳೆ. 'ಊರನ್ನು ಬಹಳ ಜಾಗರೂಕತೆಯಿಂದ ದಾಟಿದೆವು' ಎಂಬ ಧ್ವನಿಪೂರ್ಣ ಸಾಲಿನೊಂದಿಗೆ ಈ ಕಥೆ ಮುಗಿಯುತ್ತದೆ.